ಓ.ಎಸ್ ನಂ. 97 /2022 ಡಿ.ಡಬ್ಲ್ಯೂ-1 (ಕಾವ್ಯ)

**ಸಾಕ್ಷಿಯನ್ನು ದಿನಾಂಕಃ 04.02.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಜಿ ಎನ್ ಎನ್ ವಕೀಲರಿಂದಃ**

1. ನಾನು 10 ನೇ ತರಗತಿ ಯವರಿಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈ ದಿನ ಸಾಕ್ಷಿಯನ್ನು ಪ್ರತಿವಾದಿ 1 ರಿಂದ 4 ಮತ್ತು 8 ರವರ ಪರವಾಗಿಯು ಸಹ ಸಾಕ್ಷಿಯು ನುಡಿಯುತ್ತಿದ್ದೇನೆ. ಮಹದೇವನಾಯಕ ನನ್ನ ಯಜಮಾನರು ಎಂದರೆ ಸರಿ. ನಮ್ಮ ಲಿಖಿತ ಹೇಳಿಕೆಯಲ್ಲಿ ನಾನು ಮತ್ತು ನನ್ನ ಗಂಡ ಮಹಾದೇವನಾಯಕ ರವರು ಸಹಿ ಮಾಡಿ ಸಲ್ಲಿಸಿರುತ್ತೇವೆ ಎಂದರೆ ಸರಿ. 1 ರಿಂದ 4 ಮತ್ತು 8 ನೇ ಪ್ರತಿವಾದಿಗಳಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ದಾವಾಸ್ತಿಯು ನನ್ನ ಹೆಸರಿಗೆ ಖಾತೆಯಾಗಿರುವುದಿಲ್ಲ ಎಂದರೆ ಸರಿ. ದಾವಾಸ್ತಿಯ ಖಾತೆಯು ಪ್ರತಿವಾದಿ 1, 6, 7 ಹಾಗೂ 8 ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಚನ್ನನಾಯಕ ರವರಿಗೆ ಮಹಾದೇವಮ್ಮ ಎಂಬ ಮಗಳು ಇದ್ದು, ಅವರು ಈಗ ಕಾಣೆಯಾಗಿರುತ್ತಾರೆ ಎಂದರೆ ಸರಿ. ಆ ಬಗ್ಗೆ ಕರಾರು ಪತ್ರದಲ್ಲಿ ಬರೆಸಲಾಗಿರುತ್ತದೆ ಎಂದರೆ ಸರಿ. ಸದರಿ ಮಹಾದೇವಮ್ಮ ನವರಿಗೂ ಸಹ ನನ್ನ ಯಜಮಾನರಿಗೆ ಇರುವ ರೀತಿಯಲ್ಲಿ ಅವರಿಗೂ ದಾವಾಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ. ಸದರಿ ಮಹದೇವಮ್ಮ ನವರ ಗಂಡನ ಹೆಸರು ಸೋಮನಾಯಕ ಎಂದರೆ ಸರಿ. ನಿಡಿ 2 ರಲ್ಲಿ ಸದರಿ ಸೋಮನಾಯಕ ರವರು ನಿಪಿ 2 (ಈ) ರಂತೆ ಸಾಕ್ಷಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಸೋಮನಾಯಕ ರವರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿಯನ್ನು ನುಡಿದಿರುತ್ತಾರೆ ಎಂದರೆ ಸರಿ.

2. ನಾನು ಯಾವುದೇ ಕಾಗದ ಪತ್ರಗಳಲ್ಲಿ ಸಹಿ ಮಾಡಿದಾಗ ನೋಡಿ ತಿಳಿದುಕೊಂಡೆ ಸಹಿ ಮಾಡುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ದಾಖಲಾತಿಗಳನ್ನು ನೊಂದಾಯಿಸುವ ಸಮಯದಲ್ಲಿ ಪಕ್ಷಗಾರರ ಆಧಾರ್ ನೊಂದಣಿ ಗುರುತಿನ ಚೀಟಿಯನ್ನು

ಪಡೆದುಕೊಳ್ಳಲಾಗುತ್ತದೆ ಎಂದರೆ ಸರಿ. ನಿಪಿ 2 ರಲ್ಲಿ ನನ್ನ ಸಹಿಗಳು ಇರುತ್ತವೆ ಎಂದರೆ ಸರಿ. ನಾನು ಸದರಿ ದಾಖಲಾತಿಯ ಕೊನೆಯ ಪುಟದಲ್ಲಿ 2 (ಡಿ) ರಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 2 ರಲ್ಲಿ ನನ್ನ ಪೋಟೋ ಸಹ ಇರುತ್ತವೆ ಎಂದರೆ ಸರಿ. ನನ್ನ ಪೋಟೋ ಇರುವಂತಹ ದಾಖಲಾತಿಯೇ ಸಣ್ಣದೇವಮ್ಮ ವರಿಗೆ ಮಾಡಿಕೊಟ್ಟ ನೊಂದಾಯಿತ ಕ್ರಯದ ಒಪ್ಪಂದದ ಕರಾರು ಪತ್ರ ಆಗಿರುತ್ತದೆ ಎಂದರೆ ಸಾಕ್ಷಿಯು ನಾವು ಯಾವುದೇ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ ನಾವು ಆಧಾರ ಪತ್ರ ಮಾಡಿಕೊಡಲು ಹೋಗಿ ಆಧಾರ್ ಬೋಗ್ಯ ಪತ್ರ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಸಹಿ ಮಾಡುವ ಸಮಯದಲ್ಲಿ ನಿಪಿ 2 ಕ್ರಯದ ಒಪ್ಪಂದ ಕರಾರು ಪತ್ರ ಎಂದು ತಿಳಿದುಕೊಂಡೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರ ನೊಂದಣಿಯಾಗುವ ಸಮಯದಲ್ಲಿ ಕ್ರಯದ ಕರಾರು ಪತ್ರವೆಂದೇ ತಿಳಿದುಕೊಂಡು ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪತ್ರ ಆಗುವ ಸಮಯದಲ್ಲಿ ನಾವು ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಗೆ ನೊಂದಾಯಿತ ದಾಖಲೆ ಮಾಡಿಕೊಡುವ ಸಮಯದಲ್ಲಿ ಹಣವನ್ನು ಪಡೆದುಕೊಳ್ಳುಲಾಗುತ್ತದೆ ಎಂದರೆ ಸಾಕ್ಷಿಯು ಈ ಹಿಂದೇಯೇ ಚನ್ನನಾಯಕ ರವರ ಮಗ ಜವರನಾಯಕ ರವರು ಸಣ್ಣದೇವಮ್ಮ ರವರಿಂದ ಒಟ್ಟು ರೂ. 5 ಲಕ್ಷದ 30 ಸಾವಿರ ಗಳನ್ನು ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ 2 ಕರಾರು ಪತ್ರದಲ್ಲಿಯು ಸಹ ಮುಂಗಡ ಹಣ ರೂ 5 ಲಕ್ಷದ 30 ಸಾವಿರ ಗಳನ್ನು ಪಡೆದುಕೊಳ್ಳಲಾಗಿರುತ್ತದೆ ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಸದರಿ ಕರಾರು ಪತ್ರದಂತೆ 3 ವರ್ಷ ವಾಯಿದೆ ಒಳಗಾಗಿ ದಾವಾಸ್ತಿಗೆ ಸಂಬಂಧಿಸಿದಂತೆ ನೊಂದಣಿಗೆ ಬೇಕಾಗುವಂತಹ ಎಲ್ಲಾ ದಾಖಲಾತಿಗಳನ್ನು ಒದಗಿಸಿ ಮತ್ತು ಉಳಿಕೆ 1 ಲಕ್ಷದ 50 ಸಾವಿರ ಗಳನ್ನು ಹಣವನ್ನು ಪಡೆದುಕೊಂಡು ನೊಂದಾಯಿತ ಕ್ರಯಪತ್ರ ಮಾಡಿಕೊಡುವುದಾಗಿ ತಿಳಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 2 ರಲ್ಲಿ ಓದಿಕೊಂಡು ತಿಳಿದೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

3. ವಾದಿ ಸಣ್ಣದೇವಮ್ಮ ರವರು ನಮ್ಮೆಲ್ಲರಿಗೂ ಕ್ರಯಪತ್ರವನ್ನು ಬಂದು ಮಾಡಿಕೊಡುವಂತೆ ತಿಳಿಸಿ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ವಾದಿ

ರವರು ನೀಡಿದ ನೋಟೀಸನ್ನು ನಾನು ಉದ್ದೇಶ ಪೂರ್ವಕವಾಗಿ ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದು ನಾವು ಕರಾರುಪತ್ರ ಮಾಡಿಕೊಟ್ಟಿರುವುದಿಲ್ಲ ಏಕೆ ನೋಟೀಸನ್ನು ತೆಗೆದುಕೊಳ್ಳಬೇಕು ಎಂದು ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನೋಟೀಸನ್ನು ಪಡೆದುಕೊಳ್ಳದೆ ಇದ್ದರೂ ಸಹ ಸದರಿ ನೋಟೀಸನ್ನು ಕ್ರಯಪತ್ರವನ್ನು ಮಾಡಿಕೊಡಲು ಕೋರಿ ವಾದಿ ರವರು ಸಲ್ಲಿಸಿದದರು ಎಂದು ನಿಮಗೆ ಹೇಗೆ ತಿಳಿಯಿತು ಎಂದರೇ ಸಾಕ್ಷಿಯು ನಮ್ಮ ಅತ್ತೆ ಮಾವ ರವರು ನೋಟೀಸನ್ನು ಸ್ವೀಕರಿಸಿಕೊಂಡಿದ್ದುದ್ದರಿಂದ ನನಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ನೋಟೀಸನ್ನು ಪಡೆದ ಕೊಂಡ ನಂತರ ಅದಕ್ಕೆ ಪ್ರತ್ತ್ಯುತ್ತರವನ್ನು ನೀಡುವುದಾಗಲೀ ಅಥವಾ ಪೋಲೀಸ್ ಠಾಣೆಗೆ ದೂರನ್ನು ನೀಡುವುದಾಗಲೀ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ನಿಮ್ಮ ತಕಾರಾರಿನಲ್ಲಿ ತಿಳಿಸಲಾಗಿರುತ್ತದೆಯೇ ಎಂದರೆ ಸಾಕ್ಷಿಯು ತಿಳಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಗಳು ವಾದಿಯಿಂದ ಸಾಲದ ರೂಪದಲ್ಲಿ ಬಡ್ಡಿ ಕೊಡಲು 5 ಲಕ್ಷದ 30 ಸಾವಿರ ರೂಗಳನ್ನು ಪಡೆದುಕೊಂಡಿದ್ದು ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿ 6 ಮತ್ತು 7 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ನಿಪಿ 2 ರಂತೆ ಕರಾರು ಪತ್ರ ಆಗಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿ. ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಆದರೆ ನನ್ನ ಗಂಡನಿಗೆ ಅದರಲ್ಲಿ ಹಕ್ಕು ಇರುವುದರಿಂದ ಸಾಂದರ್ಬಿಕ ಸಾಕ್ಷಿದಾರರಾಗಿ ನನ್ನ ಸಹಿಯನ್ನು ಪಡೆದುಕೊಳ್ಳಲಾಗಿರುತ್ತದೆ ಎಂದರೆ ಸಾಕ್ಷಿಯು ದಾವಾಸ್ತಿಯಲ್ಲಿ ನನಗೂ ಸಹ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ನಾನು ವಿದ್ಯಾವಂತಳಾಗಿದ್ದು ಕರಾರು ಪತ್ರವನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದರು ಸಹ ದಾವಾಸ್ತಿಗಳ ಮೇಲೆ ಹೆಚ್ಚಿನ ಹಣ ಪಡೆದುಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಪ್ರತಿವಾದಿ 6 ಮತ್ತು 7 ರವರ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.)

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ